# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **900** |
| ಸದಸ್ಯರ ಹೆಸರು | : | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 14-07-2023 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೃಷಿ ಇಲಾಖೆಯಲ್ಲಿ ಬೆಳೆ ವಿಮೆಯನ್ನು ಪಾವತಿಸುವಲ್ಲಿ ಅನುಸರಿಸಲಾಗುತ್ತಿರುವ ಮಾನದಂಡಗಳೇನು; (ಪೂರ್ಣ ವಿವರ ನೀಡುವುದು) | ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ರೈತರು ಬೆಳೆ ವಿಮೆಯನ್ನು ಪಾವತಿಸಲು ಅನುಸರಿಸಲಾಗುವ ಮಾನದಂಡಗಳು ಈ ಕೆಳಗಿನಂತಿದೆ.<br><br>• ರೈತರು ಆಹಾರ ಮತ್ತು ಎಣ್ಣೆಕಾಳು ಬೆಳೆಗಳಿಗೆ 2% ವಿಮಾ ಪ್ರೀಮಿಯಂ ಮೊತ್ತವನ್ನು ಮುಂಗಾರು ಬೆಳೆಗಳಿಗೆ ಮತ್ತು 1.5% ವಿಮಾ ಪ್ರೀಮಿಯಂ ಮೊತ್ತವನ್ನು ಹಿಂಗಾರು ಹಾಗೂ ಬೇಸಿಗೆ ಹಂಗಾಮಿನ ಬೆಳೆಗಳಿಗೆ ಹಾಗೂ ವಾರ್ಷಿಕ ವಾಣಿಜ್ಯ ಮತ್ತು ತೋಟಗಾರಿಕಾ ಬೆಳೆಗಳಿಗೆ 5% ಪ್ರೀಮಿಯಂ ಮೊತ್ತವನ್ನು ಪಾವತಿಸಬೇಕಾಗಿರುತ್ತದೆ.<br><br>• ಈ ಯೋಜನೆಯ ಮಾರ್ಗಸೂಚಿಯನ್ವಯ ಬೆಳೆಸಾಲ ಪಡೆದ ಹಾಗೂ ಬೆಳೆ ಸಾಲ ಪಡೆಯದ ರೈತರು ಬೆಳೆ ವಿಮೆಯಡಿ ಒಳಪಡುವುದು ಐಚ್ಛಿಕವಾಗಿರುತ್ತದೆ.<br><br>• ಬೆಳೆ ಸಾಲ ಪಡೆಯದ ರೈತರು ಯೋಜನೆಯಲ್ಲಿ ಪಾಲ್ಗೊಳ್ಳಲು ಹತ್ತಿರದ ಬ್ಯಾಂಕುಗಳು/ ಸಾಮಾನ್ಯ ಸೇವಾ ಕೇಂದ್ರ/ಕರ್ನಾಟಕ ಒನ್ ಕೇಂದ್ರ/ ಗ್ರಾಮ ಒನ್ ಕೇಂದ್ರಗಳನ್ನು ಸಂಪರ್ಕಿಸಿ ಅರ್ಜಿಯೊಂದಿಗೆ ಭೂಮಿ ಹೊಂದಿರುವುದಕ್ಕೆ ದಾಖಲಾತಿಗಳಾದ ಪಹಣಿ / ಆಧಾರ್ ಕಾರ್ಡ್ ಪ್ರತಿ / ಬ್ಯಾಂಕಿನ ಖಾತೆಯ ವಿವರ ನೀಡುವುದು.<br><br>• ಬೆಳೆ ವಿಮೆ ಯೋಜನೆಯಡಿ ಪಾಲ್ಗೊಳ್ಳುವ ರೈತರು ಕಡ್ಡಾಯವಾಗಿ ಆಧಾರ್ ಸಂಖ್ಯೆಯನ್ನು ಅರ್ಜಿ ನಮೂನೆಯಲ್ಲಿ ನಮೂದಿಸಬೇಕು. |

| | | |
|---|---|---|
| | | • ಬೆಳೆ ಸಾಲ ಪಡೆಯದ ರೈತರು ಅಂದಾಜು ಬೆಳೆ ಬಿತ್ತನೆ ಆಧಾರದ ಮೇಲೆ ಬಿತ್ತನೆ ಪೂರ್ವದಲ್ಲೂ ಕೂಡ ಪಾಲ್ಗೊಳ್ಳಬಹುದು.<br>• ಬೆಳೆ ಸಾಲ ಪಡೆದ ರೈತರು ಈ ಯೋಜನೆಯಲ್ಲಿ ಭಾಗವಹಿಸಲು ಇಚ್ಛೆ ಪಡದೇ ಇದ್ದಲ್ಲಿ, ಈ ಕುರಿತು ಬ್ಯಾಂಕಿನ ವ್ಯವಸ್ಥಾಪಕರಿಗೆ ಬೆಳೆ ನೋಂದಣಿ ಅಂತಿಮ ದಿನಾಂಕಕ್ಕಿಂತ 7 ದಿನಗಳು ಮುಂಚಿತವಾಗಿ ಲಿಖಿತವಾಗಿ ಮುಚ್ಚಳಿಕೆ ಪತ್ರವನ್ನು ನೀಡಿದಲ್ಲಿ ಅಂತಹ ರೈತರನ್ನು ಬೆಳೆವಿಮೆ ಯೋಜನೆಯಿಂದ ಕೈಬಿಡಲಾಗುವುದು.<br>• 2023ರ ಮುಂಗಾರು ಹಂಗಾಮಿನಲ್ಲಿ ಬೆಳೆ ವಿಮೆ ನೋಂದಣಿಗಾಗಿ ರೈತರು FRUITS ID ಪಡೆದುಕೊಂಡಿರಬೇಕು. FRUITS ತಂತ್ರಾಂಶದಲ್ಲಿ ದಾಖಲಾದ ಸರ್ವೆ ನಂಬರ್‌ಗಳಿಗೆ ಮಾತ್ರ ಬೆಳೆ ವಿಮೆಯಡಿ ನೋಂದಣಿ ಮಾಡಲು ಅವಕಾಶವಿರುತ್ತದೆ.<br>• ಜಂಟಿ ಖಾತೆದಾರರು FRUITS ತಂತ್ರಾಂಶದಲ್ಲಿ ದಾಖಲಾದ ವಿಸ್ತೀರ್ಣಕ್ಕನುಗುಣವಾಗಿ ಬೆಳೆ ವಿಮೆ ನೋಂದಣಿ ಮಾಡಲು ಅವಕಾಶವಿರುತ್ತದೆ. |
| ಆ) | ಯಾವ ಯಾವ ಬೆಳೆಗೆ ಬೆಳೆವಿಮೆಯನ್ನು ನೀಡಲಾಗುತ್ತಿದೆ; (ವಿವರ ನೀಡುವುದು) | ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ಹಂಗಾಮುವಾರು ಬೆಳೆ ವಿಮೆಗೆ ಒಳಪಡುವ ಬೆಳೆಗಳ ವಿವರವನ್ನು **ಅನುಬಂಧ-1**ರಲ್ಲಿ ಒದಗಿಸಿದೆ. |
| ಇ) | ಕಳೆದ 3 ವರ್ಷಗಳಲ್ಲಿ ಮೈಸೂರು, ಚಾಮರಾಜನಗರ, ಮಂಡ್ಯ ಹಾಗೂ ಹಾಸನ ಜಿಲ್ಲೆಗಳಲ್ಲಿ ಎಷ್ಟು ರೈತರು ಬೆಳೆ ವಿಮೆಗೆ ಅರ್ಜಿ ಸಲ್ಲಿಸಿದ್ದಾರೆ; (ಜಿಲ್ಲಾವಾರು ವಿವರ ನೀಡುವುದು) | ಕಳೆದ 3 ವರ್ಷಗಳಲ್ಲಿ ಮೈಸೂರು, ಚಾಮರಾಜನಗರ, ಮಂಡ್ಯ ಹಾಗೂ ಹಾಸನ ಜಿಲ್ಲೆಗಳಲ್ಲಿ ರೈತರು ಬೆಳೆ ವಿಮೆಗೆ ಅರ್ಜಿ ಸಲ್ಲಿಸಿರುವ ಜಿಲ್ಲಾವಾರು ರೈತರ ವಿವರವನ್ನು **ಅನುಬಂಧ-2** ರಲ್ಲಿ ಒದಗಿಸಿದೆ. |
| ಈ) | ಸದರಿ ಅವಧಿಯಲ್ಲಿ ಇದುವರೆಗೂ ಎಷ್ಟು ರೈತರಿಗೆ ಬೆಳೆ ವಿಮೆ ಮಂಜೂರಾಗಿದೆ; ಹಾಗೂ ಎಷ್ಟು ಮೊತ್ತ ಪಾವತಿಸಲಾಗಿದೆ; (ಜಿಲ್ಲಾವಾರು ವಿವರ, ಮಾಹಿತಿ ನೀಡುವುದು) | ಸದರಿ ಅವಧಿಯಲ್ಲಿ ಇದುವರೆಗೂ ರೈತರಿಗೆ ಮಂಜೂರಾದ ಬೆಳೆ ವಿಮೆ ಹಾಗೂ ವಿಮಾ ಸಂಸ್ಥೆಯವರಿಂದ ಪಾವತಿಸಲಾದ ಮೊತ್ತದ ಜಿಲ್ಲಾವಾರು ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಿದೆ. |
| ಉ) | ಪಾವತಿಸಬೇಕಾಗಿರುವ ಬಾಕಿ ಮೊತ್ತವೆಷ್ಟು; | ಸದರಿ ಅವಧಿಯಲ್ಲಿ ರೈತರಿಗೆ ಪಾವತಿಸಬೇಕಾಗಿರುವ ಬಾಕಿ ಮೊತ್ತ ರೂ. 1146.76 ಲಕ್ಷಗಳು. |

| | | |
|---|---|---|
| ಊ) | ಯಾವ ಕಾಲಮಿತಿಯಲ್ಲಿ ಬಾಕಿ ಮೊತ್ತವನ್ನು ಪಾವತಿಸಲಾಗುವುದು? | ರೈತರ ಬ್ಯಾಂಕ್ ಖಾತೆಗೆ ಆಧಾರ್ ಜೋಡಣೆಯಾಗದ ಕಾರಣ ಬೆಳೆ ವಿಮೆ ಪರಿಹಾರ ಮೊತ್ತವು ಕೆಲವು ರೈತರ ಬ್ಯಾಂಕ್ ಖಾತೆಗೆ ಜಮೆಯಾಗದೆ ಬೌನ್ಸ್ ಆಗಿರುತ್ತದೆ. ಸದರಿ ಸಮಸ್ಯೆಯು ಬಗೆಹರಿದಂತೆ ಹಂತ ಹಂತವಾಗಿ ಬೆಳೆ ವಿಮೆ ಪರಿಹಾರ ಮೊತ್ತವನ್ನು ಅನುಷ್ಠಾನ ವಿಮಾ ಸಂಸ್ಥೆಯವರು ರೈತರ ಬ್ಯಾಂಕ್ ಖಾತೆಗೆ ಪಾವತಿಸುವರು. |

*ಕೃ ಇ 57 ಎಎಂಎಸ್ 2023*

**(ಎನ್.ಚಲುವರಾಯಸ್ವಾಮಿ)**
ಕೃಷಿ ಸಚಿವರು

ವಿಧಾನ ಪರಿಷತ್ತಿನ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:900 ಕ್ಕೆ

**ಅನುಬಂಧ-1**

**ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ಹಂಗಾಮುವಾರು ಬೆಳೆ ವಿಮೆಗೆ ಒಳಪಡುವ ಬೆಳೆಗಳ ವಿವರ**

| ಕ್ರಮ ಸಂಖ್ಯೆ | ಮುಂಗಾರು ಬೆಳೆಗಳು | ಹಿಂಗಾರು ಬೆಳೆಗಳು | ಬೇಸಿಗೆ ಬೆಳೆಗಳು |
|---|---|---|---|
| 1 | ಅರಿಶಿಣ- | ಭತ್ತ (ನೀರಾವರಿ) | ನೆಲಗಡಲೆ (ಶೇಂಗಾ)(ನೀರಾವರಿ) |
| 2 | ಅಲಸಂದೆ(ಮ.ಆ) | ಜೋಳ (ನೀರಾವರಿ) | ಭತ್ತ(ನೀ) |
| 3 | ಆಲೂಗಡ್ಡೆ(ನೀ) | ಜೋಳ (ಮಳೆ ಆಶ್ರಿತ) | ರಾಗಿ(ನೀ) |
| 4 | ಆಲೂಗಡ್ಡೆ(ಮ.ಆ) | ರಾಗಿ (ನೀರಾವರಿ) | ಸೂರ್ಯಕಾಂತಿ (ನೀರಾವರಿ) |
| 5 | ಈರುಳ್ಳಿ(ನೀ) | ರಾಗಿ (ಮಳೆ ಆಶ್ರಿತ) | ಈರುಳ್ಳಿ (ನೀರಾವರಿ) |
| 6 | ಈರುಳ್ಳಿ(ಮ.ಆ) | ಮುಸುಕಿನಜೋಳ (ನೀ) | ಟೊಮ್ಯಾಟೋ (ಅನಿರ್ದಿಷ್ಟ) |
| 7 | ಉದ್ದು(ಮ.ಆ) | ಮುಸುಕಿನಜೋಳ (ಮ. ಆ) | |
| 8 | ಎಲೆಕೋಸು- | ಗೋಧಿ (ನೀರಾವರಿ) | |
| 9 | ಎಳ್ಳು(ಮ.ಆ) | ಗೋಧಿ (ಮಳೆ ಆಶ್ರಿತ) | |
| 10 | ಕೆಂಪು ಮೆಣಸಿನಕಾಯಿ(ನೀ) | ಕಡಲೆ (ನೀರಾವರಿ) | |
| 11 | ಕೆಂಪು ಮೆಣಸಿನಕಾಯಿ(ಮ.ಆ) | ಕಡಲೆ (ಮಳೆ ಆಶ್ರಿತ) | |
| 12 | ಜೋಳ(ನೀ) | ಉದ್ದು (ಮಳೆ ಆಶ್ರಿತ) | |
| 13 | ಜೋಳ(ಮ.ಆ) | ಹುರುಳಿ (ಮಳೆ ಆಶ್ರಿತ) | |
| 14 | ಟೊಮ್ಯಾಟೊ- | ಹೆಸರು (ಮಳೆ ಆಶ್ರಿತ) | |
| 15 | ತೊಗರಿ(ನೀ) | ಅಗಸೆ (ಮಳೆ ಆಶ್ರಿತ) | |
| 16 | ತೊಗರಿ(ಮ.ಆ) | ಸೂರ್ಯಕಾಂತಿ (ನೀರಾವರಿ) | |
| 17 | ನವಣೆ(ಮ.ಆ) | ಸೂರ್ಯಕಾಂತಿ (ಮಳೆ ಆಶ್ರಿತ) | |
| 18 | ನೆಲಗಡಲೆ (ಶೇಂಗಾ)(ನೀ) | ನೆಲಗಡಲೆ(ಶೇಂಗಾ)(ಮಳೆ ಆಶ್ರಿತ) | |
| 19 | ನೆಲಗಡಲೆ (ಶೇಂಗಾ)(ಮ.ಆ) | ಕುಸುಮೆ (ಮಳೆ ಆಶ್ರಿತ) | |
| 20 | ಭತ್ತ(ನೀ) | ಈರುಳ್ಳಿ (ನೀರಾವರಿ) | |
| 21 | ಭತ್ತ(ಮ.ಆ) | ಆಲೂಗಡ್ಡೆ (ನೀರಾವರಿ) | |
| 22 | ಮುಸುಕಿನ ಜೋಳ(ನೀ) | ಟೊಮ್ಯಾಟೋ(ಅನಿರ್ದಿಷ್ಟ) | |
| 23 | ಮುಸುಕಿನ ಜೋಳ(ಮ.ಆ) | | |
| 24 | ರಾಗಿ(ನೀ) | | |
| 25 | ರಾಗಿ(ಮ.ಆ) | | |
| 26 | ಸಜ್ಜೆ(ನೀ) | | |
| 27 | ಸಜ್ಜೆ(ಮ.ಆ) | | |
| 28 | ಸಾವೆ(ಮ.ಆ) | | |
| 29 | ಸೂರ್ಯಕಾಂತಿ(ನೀ) | | |
| 30 | ಸೂರ್ಯಕಾಂತಿ(ಮ.ಆ) | | |
| 31 | ಸೋಯಾಅವರೆ(ನೀ) | | |
| 32 | ಸೋಯಾಅವರೆ(ಮ.ಆ) | | |
| 33 | ಹತ್ತಿ(ನೀ) | | |
| 34 | ಹತ್ತಿ(ಮ.ಆ) | | |
| 35 | ಹುರುಳಿ(ಮ.ಆ) | | |
| 36 | ಹೆಸರು(ಮ.ಆ) | | |

ವಿಧಾನ ಪರಿಷತ್ತಿನ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:900 ಕ್ಕೆ

**ಅನುಬಂಧ-2**

**ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ಕಳೆದ 3 ವರ್ಷಗಳಲ್ಲಿ ಮೈಸೂರು, ಚಾಮರಾಜನಗರ, ಮಂಡ್ಯ ಹಾಗೂ ಹಾಸನ ಜಿಲ್ಲೆಗಳಲ್ಲಿ ರೈತರು ಬೆಳೆ ವಿಮೆಗೆ ಅರ್ಜಿ ಸಲ್ಲಿಸಿರುವ, ರೈತರಿಗೆ ಮಂಜೂರಾದ ಬೆಳೆ ವಿಮೆ ಹಾಗೂ ವಿಮಾ ಸಂಸ್ಥೆಯವರಿಂದ ಪಾವತಿಸಲಾದ ಮೊತ್ತ ಮತ್ತು ಪಾವತಿಸಬೇಕಾಗಿರುವ ಬಾಕಿ ಮೊತ್ತದ ವಿವರ**

ಮೊತ್ತ ರೂ. ಲಕ್ಷಗಳಲ್ಲಿ

**2020-21**

| ಜಿಲ್ಲೆ | ಅರ್ಜಿ ಸಲ್ಲಿಸಿದ ರೈತರ ಸಂಖ್ಯೆ | ಬೆಳೆ ವಿಮೆ ಪರಿಹಾರ ಮಂಜೂರು | | ಪಾವತಿಸಲಾದ ಬೆಳೆ ವಿಮೆ ಪರಿಹಾರ | | ಪಾವತಿಸಬೇಕಾಗಿರುವ ಬಾಕಿ ಮೊತ್ತ | |
|---|---|---|---|---|---|---|---|
| | | ರೈತರ ಸಂಖ್ಯೆ | ಮೊತ್ತ | ರೈತರ ಸಂಖ್ಯೆ | ಮೊತ್ತ | ರೈತರ ಸಂಖ್ಯೆ | ಮೊತ್ತ |
| ಚಾಮರಾಜನಗರ | 16683 | 5398 | 207.33 | 5306 | 204.90 | 92 | 2.43 |
| ಹಾಸನ | 37304 | 27816 | 1924.15 | 27675 | 1912.59 | 141 | 11.56 |
| ಮಂಡ್ಯ | 4652 | 3391 | 215.46 | 3375 | 214.45 | 16 | 1.00 |
| ಮೈಸೂರು | 3159 | 570 | 59.44 | 561 | 57.94 | 9 | 1.50 |
| **ಒಟ್ಟು** | **61798** | **37175** | **2406.39** | **36917** | **2389.89** | **258** | **16.50** |

**2021-22**

| ಜಿಲ್ಲೆ | ಅರ್ಜಿ ಸಲ್ಲಿಸಿದ ರೈತರ ಸಂಖ್ಯೆ | ಬೆಳೆ ವಿಮೆ ಪರಿಹಾರ ಮಂಜೂರು | | ಪಾವತಿಸಲಾದ ಬೆಳೆ ವಿಮೆ ಪರಿಹಾರ | | ಪಾವತಿಸಬೇಕಾಗಿರುವ ಬಾಕಿ ಮೊತ್ತ | |
|---|---|---|---|---|---|---|---|
| | | ರೈತರ ಸಂಖ್ಯೆ | ಮೊತ್ತ | ರೈತರ ಸಂಖ್ಯೆ | ಮೊತ್ತ | ರೈತರ ಸಂಖ್ಯೆ | ಮೊತ್ತ |
| ಚಾಮರಾಜನಗರ | 16522 | 5741 | 367.71 | 5678 | 363.89 | 63 | 3.82 |
| ಹಾಸನ | 27868 | 26170 | 2744.56 | 26098 | 2736.46 | 72 | 8.10 |
| ಮಂಡ್ಯ | 12904 | 10576 | 686.11 | 10526 | 682.22 | 50 | 3.89 |
| ಮೈಸೂರು | 12483 | 4668 | 178.08 | 4556 | 174.41 | 112 | 3.66 |
| **ಒಟ್ಟು** | **69777** | **47155** | **3976.46** | **46858** | **3956.98** | **297** | **19.47** |

**2022-23**

| ಜಿಲ್ಲೆ | ಅರ್ಜಿ ಸಲ್ಲಿಸಿದ ರೈತರ ಸಂಖ್ಯೆ | ಬೆಳೆ ವಿಮೆ ಪರಿಹಾರ ಮಂಜೂರು | | ಪಾವತಿಸಲಾದ ಬೆಳೆ ವಿಮೆ ಪರಿಹಾರ | | ಪಾವತಿಸಬೇಕಾಗಿರುವ ಬಾಕಿ ಮೊತ್ತ | |
|---|---|---|---|---|---|---|---|
| | | ರೈತರ ಸಂಖ್ಯೆ | ಮೊತ್ತ | ರೈತರ ಸಂಖ್ಯೆ | ಮೊತ್ತ | ರೈತರ ಸಂಖ್ಯೆ | ಮೊತ್ತ |
| ಚಾಮರಾಜನಗರ | 12631 | 6111 | 303.64 | 5968 | 296.56 | 143 | 7.08 |
| ಹಾಸನ | 120373 | 45530 | 3217.50 | 32890 | 2363.50 | 12640 | 854.00 |
| ಮಂಡ್ಯ | 34198 | 27508 | 1632.59 | 27099 | 1612.48 | 409 | 20.12 |
| ಮೈಸೂರು | 9958 | 5697 | 292.16 | 2257 | 62.56 | 3440 | 229.60 |
| **ಒಟ್ಟು** | **177160** | **84846** | **5445.89** | **68214** | **4335.10** | **16632** | **1110.79** |